ಕಳಿಸಿದ್ದೇವೆ' ಎಂದನು ಕೃಷ್ಣ.

ಅವಳು ನಸುಗೋಪದಿಂದ 'ಆಂಧ್ರ, ತೆಲಂಗಾಣದಲ್ಲಿ ಎ.ಟಿ.ಎಸ್. ಆಫೀಸ್ ಎಲ್ಲಿದೆ? ಹಾಗೆ ನೋಡಿದರೆ ಕೇರಳ ಬಿಟ್ಟರೆ ಬೇರೆ ಯಾವ ದಕ್ಷಿಣ ರಾಜ್ಯದಲ್ಲಿಯೂ ಎ.ಟಿ.ಎಸ್. ಆಫೀಸ್ ಇಲ್ಲ. ನೀವೆಲ್ಲಿಗೆ ಕಳಿಸಿದರಿ? ಕೊಚ್ಚಿನ್‌ಗಾ?' ಎಂದು ಕೇಳಿದಳು.

ಅವನಿಗೆ ಷಾಕ್ ಆಯಿತು. ನಿಜಕ್ಕೂ ಮಿಜ್ರಾಡಿನ್ ಫೋಟೋವನ್ನು ಎಲ್ಲೆಲ್ಲಿಗೆ ಕಳಿಸಿದ್ದಾರೋ ಅವನಿಗೆ ತಿಳಿದಿರಲಿಲ್ಲ.

'ತಿಂಗಳಾನುಗಟ್ಟಲೆಯಾದರೂ ಕೇಸ್‌ಗಳು ಏಕೆ ದಡ ಸೇರುವುದಿಲ್ಲ ಎಂದು ಈಗ ಅರ್ಥವಾಯ್ತು. ನಾನು ನಿಮಗೆ ಅನ್ನುತ್ತಿಲ್ಲ. ಬ್ಯುರೋಕ್ರಸಿಯಲ್ಲಿ, ರೆಡ್‌ಟೇಪಿಸಂನಲ್ಲಿ ಹೂತು ಹೋಗಿರುವ ನಿಮ್ಮ ಡಿಪಾರ್ಟ್‌ಮೆಂಟ್‌ನ ಅನ್ನುತ್ತಿದ್ದೇನೆ. ವರ್ಷಗಳಿಂದ ಪೊಲೀಸರು ಹುಡುಕುತ್ತಿರುವ ಒಬ್ಬ ಹಾರ್ಡ್‌ಕೋರ್ ಟೆರರಿಸ್ಟ್ ಫೋಟೋ ಸಿಕ್ಕಿತು. ಬೇರೆ ರಾಜ್ಯಗಳಿಗೆ ಕಳಿಸಿ ಕೈ ತೊಳೆದುಕೊಂಡಿರಿ. ಈ ನಡುವೆ ಅವನು ನಮ್ಮಪ್ಪನನ್ನು ಕರೆದುಕೊಂಡು ಕಾಶ್ಮೀರ್‌ಗೆ ಹೋಗಿಬಿಟ್ಟಿರುತ್ತಾನೆ'

ಅವಳನ್ನು ಸಮಾಧಾನಪಡಿಸಲಿಕ್ಕೆ 'ಒಬ್ಬ ಮನುಷ್ಯನನ್ನು ಕಾಶ್ಮೀರ್‌ಗೆ ಸಾಗಿಸುವುದು ಅಷ್ಟು ಸುಲಭವಲ್ಲ. ಟ್ರೇನ್‌ನಲ್ಲಿ ಸಾಧ್ಯವಿಲ್ಲ. ಕೈಕಾಲು ಕಟ್ಟಿ ಅಥವಾ ಮತ್ತಿನ ಔಷಧಿ ಕೊಟ್ಟು ವ್ಯಾನ್‌ನಲ್ಲಿ ಸಾಗಿಸಬೇಕು. ಅಷ್ಟು ರಿಸ್ಕ್ ತೆಗೆದುಕೊಳ್ಳುವುದಿಲ್ಲ. ಇನ್ಫಾರ್ಮರ್‌ಗಳ ವಿವರ ಸಂಗ್ರಹಿಸುವುದಕ್ಕೆ ನಿಮ್ಮ ಅಪ್ಪನ ಪ್ರಾಣ ಅವರಿಗೆ ಬಹಳ ಮುಖ್ಯ. ಆದ್ದರಿಂದ ಅವರನ್ನು ಇಲ್ಲಿಯೇ ಎಲ್ಲೋ ಬಂಧಿಸಿಟ್ಟಿರುತ್ತಾರೆ' ಎಂದನು.

'ನಿಜ' ಎನ್ನುವಂತೆ ಅವನ ಕಡೆ ನೋಡಿದಳು ಕಲ್ಯಾಣಿ.

'ಏಕೆ ಹಾಗೆ ನೋಡುತ್ತಿದ್ದೀರಿ? ಇಷ್ಟು ದಿನಕ್ಕೆ ಒಂದು ಒಳ್ಳೆಯ ಪಾಯಿಂಟ್ ಹೇಳಿದೆನಾ? ಈ ಯೋಚನೆ ಕೂಡ ನಿಷ್ಪ್ರಯೋಜಕವಾಗಿದೆ ಎಂದೇ?'

'ಛೆ ಛೇ..... ನಿಮ್ಮ ಮೇಲೆ ನಂಗೆ ಬಹಳ ಗೌರವ ಇದೆ ಸರ್.... ಅದು ನಿಜವಾದರೆ ನಮ್ಮ ತಂದೆಗೆ ಟಾರ್ಚರ್ ಕೊಡುತ್ತಾ ಮಿಜ್ರಾಡಿನ್ ಕೂಡಾ ಇಲ್ಲೇ ಇದ್ದಾನೆ. ಅವನ ಫೋಟೋ ನಮಗೆ ಸಿಕ್ಕಿರುವ ವಿಷಯ ತಿಳಿದಿರುವುದರಿಂದ ಇನ್ನು ಮುಂದೆ ಇನ್ನಷ್ಟು ಎಚ್ಚರಿಕೆಯಿಂದ ಇರುತ್ತಾನೆ. ನಾನು ಯೋಚಿಸುತ್ತಾ ಇರುವುದು ಅದಲ್ಲ. ಮಿಜ್ರಾಡಿನ್ ಮಧ್ಯಾಹ್ನ ಹೊರಗೆ ಹೋಗಿದ್ದ ಎಂದೆನಲ್ಲಾ, ಎಲ್ಲಿಗೆ ಹೋಗಿದ್ದ ಎಂದು ತಿಳಿದುಕೊಂಡರೆ ಯಾವುದಾದರೂ ಸುಳಿವು ಸಿಗಬಹುದು'

'ಆಟೋಸ್ಟ್ಯಾಂಡ್‌ನಲ್ಲಿ ವಿಚಾರಿಸೋಣ' ಎಂದನು.

'ಕರೆಕ್ಟೇ. ಆದರೆ ಇದು ನಡೆದು ಬಹಳ ದಿನವಾಯ್ತು. ಅಲ್ಲದೆ ಅವನು ಸ್ಟ್ಯಾಂಡ್‌ಗೆ ಹೋಗಿ ಆಟೋ ಹಿಡಿಯದಿದ್ದರೆ? ದಾರಿಯಲ್ಲೇ ಆಟೋ ಸಿಕ್ಕಿದ್ದರೆ? ಅಲ್ಲದೆ ಎಷ್ಟೋ ಪ್ಯಾಸೆಂಜರ್‌ಗಳು, ಅವರ ನೆನಪು ಡ್ರೈವರ್‌ಗೆ ಇರಬೇಕಲ್ಲ?'

'ಎಲ್ಲಾ ಮುಗಿದು ಹೋಯ್ತು ಅಂದುಕೊಳ್ಳದೆ ಇನ್ನೊಂದು ಪ್ರಯತ್ನ ಮಾಡುತ್ತೇನೆ ಅಂದುಕೊಳ್ಳಬೇಕು, ಅದರಲ್ಲಿ ತಪ್ಪೇನಿಲ್ಲ' ಎಂದನು.

'ಸರಿ ನಡೆಯಿರಿ, ಇನ್ನೇಕೆ ತಡ ಎಂಬಂತೆ ಹೇಳಿದಳು.

'ಒಂದು ನಿಮಿಷ' ಎಂದು ಪರ್ಸ್‌ನಿಂದ ಫ್ಲೇಟ್ ತೆಗೆದು ಪೂರ್ವದ ಕಡೆ ಹಿಡಿದು, ಕಣ್ಮುಚ್ಚಿ ಏಕಾಗ್ರತೆಯಿಂದ ಧ್ಯಾನಿಸಿ ನಂತರ 'ನಡೆಯಿರಿ ಹೋಗೋಣ' ಎಂದನು.

ಅವಳು ವಿಸ್ಮಯದಿಂದ 'ಯಾರ ಫೋಟೋ ಅದು?' ಎಂದು ಕೇಳಿದಳು.

'ಗಣಪತಿ.... ಮನಸ್ಫೂರ್ತಿಯಾಗಿ ಪ್ರಾರ್ಥನೆ ಮಾಡಿದರೆ ಅವಿಘ್ನಮಸ್ತು ಎಂದು ಆಶೀರ್ವಾದ ಮಾಡುತ್ತಾನೆ.... ಅಂತ ನಮ್ಮ ತಾತನವರು ಹೇಳುತ್ತಿದ್ದರು'

'ಮಾತು ಮಾತಿಗೆ ತಾತನವರ ಬಗ್ಗೆ ಹೇಳುತ್ತೀರಿ. ಅವರು ಏನು ಮಾಡುತ್ತಿದ್ದರು?', ಆಟೋ ಸ್ಟ್ಯಾಂಡ್ ಕಡೆ ಹೆಜ್ಜೆ ಹಾಕುತ್ತ ಕೇಳಿದಳು.

'ಸಾಮವೇದ ಸರ್ವರಾಯ ಶರ್ಮ ಅಂತ... ಸಂಸ್ಕೃತ ಪಾಠಶಾಲೆಯಲ್ಲಿ ಪಾಠ ಹೇಳುತ್ತಿದ್ದರು.'

ಅವಳು ಆಶ್ಚರ್ಯದಿಂದ 'ಯಾಜ್ಞವಲ್ಕ್ಯ ಸ್ಮೃತಿಗೆ ಭಾಷ್ಯ ಬರೆದವರು ನಿಮ್ಮ ತಾತನಾ?' ಎಂದು ಕೇಳಿದಳು.

ಅವನು ತಲೆದೂಗಿ 'ಹೌದುರೀ, ನಾನು ಮಾತ್ರ ಶ್ರೋತ್ರೀಯ ವಂಶದಲ್ಲಿ ಹುಟ್ಟಿ ಟೆರರಿಸ್ಟ್‌ಗಳ ಜೊತೆ ಸಂಸಾರ ಮಾಡುತ್ತಿದ್ದೇನೆ'

'ಹಾಗೇಕೆ ತಿಳಿಯುತ್ತೀರಿ, ದೇಶ ಸೇವೆ ಮಾಡುತ್ತಿದ್ದೇನೆ ಅಂತ ತಿಳಿಯಬಹುದಲ್ಲಾ?'

'ಅದಿರಲಿ ನೀವು ಯಜ್ಞವಲ್ಕ್ಯ ಓದಿದ್ದೀರಾ?' ಎಂದು ಕೇಳಿದನು.

'ಯಜ್ಞ ಅಲ್ಲ ಯಾಜ್ಞವಲ್ಕ್ಯ' ಎಂದು ತಿದ್ದಿದಳು.

'ಆ ವಂಶದಲ್ಲಿ ಅಡ್ಡ ಹುಟ್ಟಿದೆ ಅಂತ ಹೇಳಿದೆನಲ್ರೀ'

'ಯಾಜ್ಞವಲ್ಕ್ಯನು ಒಬ್ಬೊಬ್ಬ ಗುರುವಿನ ಬಳಿ ಒಂದೊಂದು ವೇದವನ್ನು ಕಲಿತು ಕೊನೆಗೆ ವೈಶಂಪಾಯನನ ಬಳಿ ಅಧ್ಯಯನ ಮಾಡಿದ ಮೇಲೆ ಅವನಿಗೆ ಗರ್ವ ಉಂಟಾಯಿತು. ಆಗ ಶಾಪಕ್ಕೆ ಗುರಿಯಾಗಿ ತಾನು ಕಲಿತ ವೇದಜ್ಞಾನವನ್ನು ರಕ್ತರೂಪದಲ್ಲಿ ಕಕ್ಕಿ ಪ್ರಾಣ ಉಳಿಸಿಕೊಂಡನು. ಆ ವಾಂತಿಯನ್ನು ತಿಂದ ತಿತ್ತಿರಿ (ತಿತ್ತೀರ) ಪಕ್ಷಿಗಳು, ಅವನ್ನು ಮತ್ತೆ ಉಚ್ಚರಿಸಿದಾಗ ಅವೇ ತೈತ್ತಿರೀಯ ಉಪನಿಷತ್ತುಗಳಾದವು' ಎಂದಳು.

ಅವು ಕೊಂಚ ಆಶ್ಚರ್ಯದಿಂದ 'ನಿಮಗಿಷ್ಟು ನಾಲೆಡ್ಜ್ ಹೇಗೆ ಬಂತು?' ಎಂದು ಕೇಳಿದನು.

'ನನ್ನ ತಂದೆಯಿಂದ ಅವಳ ಮಾತಿನಲ್ಲಿ ಹೆಮ್ಮೆ ಇತ್ತು. 'ಜ್ಞಾನ ಸಂಪಾದನೆಗಿಂತ ದೊಡ್ಡ ಆನಂದ ಬೇರೆ ಯಾವುದೂ ಇಲ್ಲವೆಂದು ಯಾವಾಗಲೂ ಅಪ್ಪ ಹೇಳುತ್ತಿದ್ದರು.... ನನಗೆ ಜನ್ಮಕೊಟ್ಟ ಅಪ್ಪ ಯಾರೋ ಗೊತ್ತಿಲ್ಲ. ಇವರು ನನ್ನನ್ನು ಪ್ರೀತಿಯಿಂದ ಬೆಳೆಸಿದರು. ಕಲ್ಯಾಣಿ ಎನ್ನುವ ಹೆಸರನ್ನೂ ಬದಲಾಯಿಸಲಿಲ್ಲ. ನಮ್ಮ ಏರಿಯಾ ಜನ ಏನೇನೋ ಹೇಳಿದರೂ ತಲೆ ಕೆಡಿಸಿಕೊಳ್ಳಲಿಲ್ಲ. ನೀವೇ ಹೇಳಿ ಬೇರೆ ಯಾವ ಹೆಣ್ಣಿಗಾದರೂ ಈ ಅದೃಷ್ಟ ಇದೆಯಾ? ಅವರೊಬ್ಬ ಮುಸ್ಲಿಂ. ಆ ಮನೆಯಲ್ಲಿ ಬೆಳೆದ ನಾನು ಉಪನಿಷತ್ತುಗಳ ಬಗ್ಗೆ ಮಾತನಾಡುತ್ತೇನೆ. ಒಂದು ಕಡೆ ವೇದ— ಇನ್ನೊಂದು ಕಡೆ ಖುರಾನ್. ಅಂತಹ ವಾತಾವರಣ ಕಲ್ಪಿಸಿದರು ನನ್ನಪ್ಪ. ಅಲ್‌ಕತರ್‌ನಿಂದ ಅಲ್ ಕಬರ್‌ವರೆಗೂ ದಿನಕ್ಕೊಂದು ಸುರಾಃ ಓದಿ ವಿವರಿಸುತ್ತಿದ್ದರು. 'ಹೇಳುತ್ತಾ ತನ್ನ ನೆನಪಿನಾಳಕ್ಕೆ ಇಳಿದಳು. 'ಹದಿನಾಲ್ಕನೇ ವಯಸ್ಸಿನಲ್ಲಿದ್ದಾಗಲೇ ಏನು ಏನು ಓದಬೇಕೆಂದು ಹೇಳಿದರು. ಇಪ್ಪತ್ತೈದನೆ ವಯಸ್ಸಿನಲ್ಲಿ ಹೇಗಿರಬೇಕೆಂದು ಗಂಡ ಹೇಳುತ್ತಾನೆ. ನಲವತ್ತರ ನಂತರ 'ನಿನ್ನದೆಲ್ಲವೂ ಹಳೇ ಕಾಲದ ಗೊಡ್ಡು ಪುರಾಣ'ಅನ್ನುತ್ತಾನೆ ಮಗ. ಅರವತ್ತರ ನಂತರ 'ಹಳೇ ಹುಣಸೇಕಾಯಿ ತೊಕ್ಕು' ಎಂದು ಮೊಮ್ಮಗ ಜರಿಯುತ್ತಾನೆ. ಆದರೆ ನನ್ನ ತಂದೆ ನನ್ನ ಅಭಿಪ್ರಾಯಗಳಿಗೆ ಗೌರವ ಕೊಟ್ಟರು. ಅವರು ಮಗಳ ಹಾಗೆ ನೋಡಲಿಲ್ಲ, ಒಬ್ಬ ಮನುಷ್ಯಳ ಹಾಗೆ ನೋಡಿದರು. ಈಗ ಅರ್ಥವಾಯಿತಾ ಕೃಷ್ಣ ಅವರಿಗಾಗಿ ನಾನ್ಯಾಕೆ ಇಷ್ಟು ಚಿಂತೆ ಮಾಡ್ತಿದ್ದೇನೆ ಅಂತ?' ಎಂದಾಗ ಅವಳ ಕಂಠ ಬಿಗಿಯಿತು.

ಅಷ್ಟರಲ್ಲಿ ಅವರು ಆಟೋಸ್ಟ್ಯಾಂಡ್ ಬಳಿಗೆ ಬಂದಿದ್ದರು. ಡ್ರೈವರ್‌ಗಳ ಬಳಿ ಅವರ ಕೆಲಸ ಅಷ್ಟು ಸುಲಭವಾಗಿರಲಿಲ್ಲ. ಫೋಟೋದಲ್ಲಿರುವ ವ್ಯಕ್ತಿಯನ್ನು ನಾವು ನೋಡಿಲ್ಲ ಎಂದು ಕೆಲವರು ಹೇಳಿದರು. ಪರಿಚಯ ಇಲ್ಲವೆಂದು ಕೆಲವರು ಹೇಳಿದರು. ನಿಜಕ್ಕೂ ಮಿಜ್ರಾಡಿನ್‌ನನ್ನು ಕಂಡವರ್ಯಾರೂ ಅಷ್ಟು ಸುಲಭವಾಗಿ ಮರೆಯುವುದಿಲ್ಲ. ಆರೂವರೆ ಅಡಿ ಎತ್ತರ, ಒಣಕಾಷ್ಠದಂತಹ ಶರೀರ, ಬದುಕಿನಲ್ಲಿ ಒಮ್ಮೆಯೂ ನಗದ ಹಾಗೆ ಕಾಣುವ ತೀಕ್ಷ್ಣ ಕಣ್ಣುಗಳು. ಬಹಳ ಕಾಲ ನೆನಪಿರುವ ಆಕಾರ.

ಕೊನೆಗೆ ಅವರ ಪ್ರಯತ್ನ ಫಲಿಸಿತು. 'ಈತನನ್ನು ನಾನು ಗಾಂಧೀ ರಸ್ತೆಯಲ್ಲಿ ಇಳಿಸಿದೆ' ಎಂದು ಅದೇ ಆಗ ಸ್ಟ್ಯಾಂಡ್‌ಗೆ ಬಂದ ಡ್ರೈವರ್ ಹೇಳಿದ.

ಕಲ್ಯಾಣಿಯ ಕಣ್ಣುಗಳು ಸಂತೋಷದಿಂದ ಹೊಳೆದವು. 'ನಡೆ, ಆ ಜಾಗ ತೋರಿಸು' ಎಂದು ಆಟೋ ಹತ್ತಲು ಹೋದಳು.

'ನಾನೀಗ ಮನೆಗೆ ಹೋಗಬೇಕು. ಈಗ ಸಾಧ್ಯವಿಲ್ಲ' ಎಂದು ಡ್ರೈವರ್‌ನ ಮುಖದಲ್ಲಿ ಕೋಪ, ಧ್ವನಿಯಲ್ಲಿ ನಿರ್ಲಕ್ಷ್ಯ ಇದ್ದವು.

'ಎಲ್ಲಿ ನಿಮ್ಮ ಮನೆ?' ಪ್ರಶ್ನಿಸಿದನು ಕೃಷ್ಣ.

'ನನಗೆ ತೆಲುಗು ಗೊತ್ತಿಲ್ಲ, ಹಿಂದಿಯಲ್ಲಿ ಮಾತಾಡಿ'

ಅದೇ ಪ್ರಶ್ನೆಯನ್ನು ಕೃಷ್ಣ ಹಿಂದಿಯಲ್ಲಿ ಕೇಳಿದನು.

'ಭೋರಬಂಡಾ'

'ಸರಿ, ನಾಳೆ ಬೆಳಿಗ್ಗೆ ಒಂಬತ್ತು ಗಂಟೆಗೆ ಬೋರಬಂಡ ಪೊಲೀಸ್ ಸ್ಟೇಷನ್‌ಗೆ ಬಾ. ನಾನಾಗಲೀ, ಇನ್ಸ್‌ಪೆಕ್ಟರ್ ಸತ್ಯನಾರಾಯಣ ಅವರಾಗಲೀ ಇರುತ್ತೇವೆ. ನಮ್ಮ ವ್ಯಾನ್‌ನಲ್ಲೇ ನೀನು ಹೇಳಿದ ಜಾಗಕ್ಕೆ ಕರೆದೊಯ್ಯುತ್ತೇವೆ. ಅಥವಾ ಅಡ್ರಸ್ ಕೊಟ್ಟರೆ ಅಲ್ಲಿಗೇ ಬಂದು ವ್ಯಾನ್